ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**194**
ಸದಸ್ಯರ ಹೆಸರು	**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)**
ಉತ್ತರಿಸಬೇಕಾದ ದಿನಾಂಕ	**14.12.2021**
ಉತ್ತರಿಸಬೇಕಾದ ಸಚಿವರು	**ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**
ಪ್ರಶ್ನೆ	**ಉತ್ತರ**

ಪ್ರಶ್ನೆ:

ಅ) ಕಳೆದ 3 ವರ್ಷಗಳಿಂದ ಬೆಂಗಳೂರು ನಗರದಲ್ಲಿ ಅಂತರಾಷ್ಟ್ರೀಯ ಮಟ್ಟದ ಟೆಕ್ ಸಮ್ಮಿಟ್ ಕಾರ್ಯಕ್ರಮದಡಿಯಲ್ಲಿ ಎಷ್ಟು ದೇಶಗಳ ಕಂಪನಿಗಳು ಪಾಲ್ಗೊಂಡಿದ್ದವು; (ವರ್ಷವಾರು ವಿವರ ನೀಡುವುದು)

ಆ) ಸದರಿ ಕಾರ್ಯಕ್ರಮಗಳಿಂದ ರಾಜ್ಯಕ್ಕೆ ಎಷ್ಟು ಮೊತ್ತದ ಬಂಡವಾಳ ಹರಿದು ಬಂದಿರುತ್ತದೆ; (ವಿವರ ನೀಡುವುದು)

ಇ) ಸದರಿ ಕಾರ್ಯಕ್ರಮಗಳಿಂದ ಇದುವರೆಗೆ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದ ಭೌತಿಕ ಪ್ರಗತಿ, ಆರ್ಥಿಕ ಪ್ರಗತಿಗಳೇನು? (ಮಾಹಿತಿ ನೀಡುವುದು)

ಉತ್ತರ:

ಕಳೆದ 3 ವರ್ಷಗಳಿಂದ ಬೆಂಗಳೂರು ನಗರದಲ್ಲಿ ಅಂತರಾಷ್ಟ್ರೀಯ ಮಟ್ಟದ ಟೆಕ್ ಸಮ್ಮಿಟ್ ಕಾರ್ಯಕ್ರಮದಡಿಯಲ್ಲಿ 2019 ರಿಂದ 2021ರವರೆಗೆ ಪಾಲ್ಗೊಂಡಿದ್ದ ದೇಶಗಳ ವರ್ಷವಾರು ವಿವರ ಈ ಕೆಳಕಂಡಂತಿರುತ್ತದೆ:-

ಕ್ರ. ಸಂ	ವರ್ಷ	ದೇಶಗಳವಿವರ
1	2019	21
2	2020	25
3	2021	48

ಇವುಗಳಲ್ಲದೇ ಹಲವಾರು MNC/GCC ಹಾಗೂ ಸಂಶೋಧನಾ ಸಂಸ್ಥೆಗಳು ಸಹ Tech Summit ನಲ್ಲಿ ಪಾಲ್ಗೊಂಡಿರುತ್ತವೆ.

ಮಾಹಿತಿ ತಂತ್ರಜ್ಞಾನ/ಜೈವಿಕ ತಂತ್ರಜ್ಞಾನ ವಲಯದಲ್ಲಿ ಆವಿಷ್ಕಾರಗಳು ಹಾಗೂ ಜಾಗತಿಕ ಮಟ್ಟದಲ್ಲಿ ನಡೆಯುವ ತಾಂತ್ರಿಕತೆಯ ಸಾಮರ್ಥ್ಯವನ್ನು ಪ್ರದರ್ಶಿಸಿ ಹಂಚಿಕೆ ಮಾಡುವುದು ಹಾಗೂ ಈ ವಲಯಗಳನ್ನು ಉನ್ನತೀಕರಿಸುವುದು ಬೆಂಗಳೂರು ಟೆಕ್ ಸಮ್ಮಿಟ್ ಕಾರ್ಯಕ್ರಮದ ಮೂಲ ಉದ್ದೇಶವಾಗಿರುತ್ತದೆ.

ಈ ಟೆಕ್ ಸಮ್ಮಿಟ್‌ನಿಂದ ಪ್ರತ್ಯಕ್ಷವಾಗಿ ಯಾವುದೇ ಮೊತ್ತದ ಬಂಡವಾಳವು ಹರಿದು ಬರುವುದಿಲ್ಲ. ಆದರೆ ಪರೋಕ್ಷವಾಗಿ ರಾಜ್ಯದ ಆರ್ಥಿಕತೆ ಹಾಗೂ ಉದ್ಯೋಗಾವಕಾಶಗಳು ಅಭಿವೃದ್ಧಿ ಹೊಂದುತ್ತವೆ. ಮುಂದುವರೆದು, ಈ ಟೆಕ್ ಸಮ್ಮಿಟ್‌ಗಾಗಿ ದೇಶ ವಿದೇಶಗಳಲ್ಲಿ ತಾಂತ್ರಿಕ ವಿಷಯಗಳ ವಿಚಾರ ವಿನಿಮಯವಾಗುವುದು ಜಗತ್ತಿನಲ್ಲೇ ರಾಜ್ಯಕ್ಕೆ ಹೆಗ್ಗಳಿಕೆಯಾಗಿದೆ. ಮುಂದುವರೆದು ಪ್ರಸಕ್ತ ಸಾಲಿನ ಸಮಾವೇಶದಲ್ಲಿ ವಿವಿಧ ರಾಷ್ಟ್ರಗಳ ಸುಮಾರು 8 ಎಲೆಕ್ಟ್ರಾನಿಕ್ಸ್ ವಲಯದ ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡುವ ಬಗ್ಗೆ ಪ್ರಾಥಮಿಕ ಹಂತದ ಮಾತುಕತೆ ನಡೆಸಿರುತ್ತವೆ.

ಸದರಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಆದರೆ ಈ

	ತರಹದ ಬೃಹತ್ ಸಮ್ಮೇಳನಗಳಿಂದ ರಾಜ್ಯವು ಈ ಕೆಳಕಂಡ ಸ್ಥಾನಮಾನವನ್ನು ಗಳಿಸುವಲ್ಲಿ ಹಾಗೂ ಮುಂಬರುವ ದಿನಗಳಲ್ಲಿ ರಾಜ್ಯವು ತಾಂತ್ರಿಕತೆಯಲ್ಲಿ ಅಗ್ರಸ್ಥಾನದಲ್ಲಿರುಲು ಸಹಕಾರಿಯಾಗಿರುತ್ತದೆ.:- • ನೀತಿ ಆಯೋಗವು ಪ್ರಕಟಿಸಿರುವ India Innovation Index ನಲ್ಲಿ 2019 ಹಾಗೂ 2020ರಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಶ್ರೇಣಿ ನೀಡಲಾಗಿದ್ದು, ಅತ್ಯಂತ ನಾವೀನ್ಯತಾ ಪೂರ್ಣ ರಾಜ್ಯವಾಗಿ ಕರ್ನಾಟಕವು ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. • ಪ್ರಸ್ತುತ ಭಾರತದಲ್ಲಿರುವ 80 ಯೂನಿಕಾರ್ನ್‌ಗಳ ಪೈಕಿ ಸುಮಾರು 37 ಯೂನಿಕಾರ್ನ್‌ಗಳು ಕರ್ನಾಟಕದಲ್ಲಿಯೇ ಸ್ಥಾಪನೆಯಾಗಿರುತ್ತವೆ. • ಪ್ರಸ್ತಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಐಟಿ ಆರ್ಥಿಕತೆಯು ಉತ್ತಮ ಚೇತರಿಕೆಯನ್ನು ಕಂಡಿದ್ದು, ಒಟ್ಟಾರೆ ಈ ಉದ್ಯಮವು ಶೇ.2-2.6 ರಷ್ಟು ಬೆಳೆದಿದ್ದು, ಮೊದಲ ಆರು ತಿಂಗಳಲ್ಲಿ ಉದ್ಯಮವು ಎರಡಂಕಿಯ ಬೆಳವಣಿಗೆಯನ್ನು ತೋರಿಸಿದೆ ಹಾಗೂ ಶೇ.12-14ರಷ್ಟು ಬೆಳೆಯುವ ನಿರೀಕ್ಷೆಯಿದೆ. ಕಳೆದ 6 ವರ್ಷಗಳಲ್ಲಿ ಮೊದಲ ಬಾರಿಗೆ ರಾಜ್ಯವು ಈ ಬೆಳವಣಿಗೆಗೆ ಕಾರಣವಾಗಿದೆ. • ಎಲೆಕ್ಟ್ರಾನಿಕ್ಸ್ ವಸ್ತುಗಳ ತಯಾರಿಕೆಯಲ್ಲಿ ದೇಶದಲ್ಲಿಯೇ ಕರ್ನಾಟಕವು, 4ನೇ ಸ್ಥಾನದಲ್ಲಿದೆ. ಭಾರತದ ಒಟ್ಟು ಎಲೆಕ್ಟ್ರಾನಿಕ್ ಕೈಗಾರಿಕಾ ಉತ್ಪಾದನೆಯ ಶೇ. 10 ರಷ್ಟು ಪಾಲು ಕರ್ನಾಟಕದಾಗಿರುತ್ತದೆ. ಕರ್ನಾಟಕ ಸರ್ಕಾರವು ಈ ಕ್ಷೇತ್ರದಲ್ಲಿ ಬಂಡವಾಳವನ್ನು ಆಕರ್ಷಿಸಲು ವಿಶೇಷ ಪ್ರೋತ್ಸಾಹಕಗಳನ್ನು ಘೋಷಿಸಿದೆ. • ಜೈವಿಕ ಆರ್ಥಿಕತೆಯಲ್ಲಿ ದೇಶದಲ್ಲಿಯೇ ಕರ್ನಾಟಕವು ಮುಂದುವರೆದ ರಾಜ್ಯವಾಗಿರುತ್ತದೆ. 2020ರಲ್ಲಿ ರಾಜ್ಯದ ಜೈವಿಕ ಆರ್ಥಿಕತೆಯು ಸುಮಾರು \$22.6 ಶತಕೋಟಿ ಮೌಲ್ಯದಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಬಯೋಫಾರ್ಮ ಮತ್ತು ಮೆಡ್‌ಟೆಕ್ ವಲಯಗಳು ಒಟ್ಟಾಗಿ ಸುಮಾರು \$9 ಶತಕೋಟಿ ಮೌಲ್ಯದ ಜೈವಿಕ ಆರ್ಥಿಕ ಮೌಲ್ಯವನ್ನು ಗಳಿಸಿವೆ ಮತ್ತು ರಾಜ್ಯದ ಜೈವಿಕ ಆರ್ಥಿಕತೆಯ 37 ಪ್ರತಿಶತಕ್ಕೂ ಹೆಚ್ಚಿನ ಕೊಡುಗೆ ನೀಡಿವೆ. ಕೋವಿಡ್-19 ಸವಾಲುಗಳ ನಡುವೆಯೂ ಕರ್ನಾಟಕ ಜೈವಿಕ ಆರ್ಥಿಕತೆಯು ಆರ್ಥಿಕ ವರ್ಷ 2021ರಲ್ಲಿ \$24.4 ಶತಕೋಟಿಗೆ ಬೆಳೆದಿದೆ. ಕರ್ನಾಟಕ ಜೈವಿಕ ಆರ್ಥಿಕ ವರದಿ 2021ರ ಪ್ರಕಾರ ಈ ಹಣಕಾಸು ವರ್ಷದ ಮೊದಲಾರ್ಧವು 40 ಪ್ರತಿಶತದಷ್ಟು ಬೆಳವಣಿಗೆಯನ್ನು ದಾಖಲಿಸಿದೆ ಮತ್ತು ಈ ಹಣಕಾಸು ವರ್ಷದ ಅಂತ್ಯದ ವೇಳೆಗೆ \$30 ಬಿಲಿಯನ್ ತಲುಪಲಿದೆ ಎಂದು ಅಂದಾಜಿಸಲಾಗಿದೆ.

(ಐಟಿಬಿಟಿ 103 ಎಲ್‌ಸಿಎಂ 2021)

(ಡಾ।। ಸಿ.ಎನ್. ಅಶ್ವಥ್ ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.